5

# “ಏಳು, ಬಾಪ್ತಿಸ್ಮ ಮಾಡಿಸಿಕೋ” (2)

ಹಲವಾರು ವರ್ಷಗಳ ಹಿಂದೆ ಹಾಲು ಹಿಂಡುವಾಗ ಕುಳಿತು ಕೊಳ್ಳಲು ಉಪಯೋಗಿಸಲು ಮೂರು ಕಾಲುಗಳ ಸ್ಟೂಲುಗಳು ಸಾಮಾನ್ಯವಾಗಿದ್ದವು. ನಿಮ್ಮ ಮನಸ್ಸಿನಲ್ಲಿ ಇಂಥ ಮೂರು ಕಾಲಿನ ಸ್ಟೂಲನ್ನು ಕಲ್ಪಿಸಿ ಕೊಳ್ಳಿರಿ. ಆ ಮೇಲೆ ಒಂದು ಕಾಲು ತೆಗೆದು ಹಾಕಲ್ಪಟ್ಟಿರುವದನ್ನು ಕಲ್ಪನೆ ಮಾಡಿಕೊಳ್ಳಿರಿ. ಏನಾಗುವುದು? (ನನ್ನ ಮನಸ್ಸಿನಲ್ಲಿ, ಆಕಳಿನ ಹಾಲು ಕರೆಯುವ ಒಬ್ಬನು ಈ ಸ್ಟೂಲಿನ ಮೇಲೆ ಕುಳಿತು ಕೊಂಡು ಹಾಲು ಕರೆಯಲು ಪ್ರಯತ್ನಿಸುವದನ್ನು ಕಲ್ಪಿಸುತ್ತೇನೆ. ಅಂತಿಮವಾಗಿ ಅವನು ಉರುಳಿಬಿದ್ದು ಹಾಲಿನ ಬ್ಯಾಕೆಟ್ ಹಾರಿ ಹೋಗಿ ಬೀಳುವದನ್ನು ನೋಡುವೆನು.) ಮೂರು ಕಾಲುಗಳ ಸ್ಟೂಲು ಎರಡು ಕಾಲುಗಳ ಮೇಲೆ ನಿಂತುಕೊಳ್ಳಲಾರದೆಂದು ಸ್ಪಷ್ಟವಾಗುತ್ತದೆ.

ಬೈಬಲಿನ ಲೇಖನಾನುಸಾರದ ಬಾಪ್ತಿಸ್ಮದಲ್ಲಿ ಮೂರು ವಿಷಯಗಳು ಒಳಗೊಂಡಿರುತ್ತವೆ: ಅದು ಸರಿಯಾದ ರಿತೀಯಲ್ಲಿ ಮಾಡಲ್ಪಡಬೇಕು (ಬಾಪ್ತಿಸ್ಮ “ಹೇಗೆ” ಎಂಬುದು); ಅದು ಸರಿಯಾದ ಕಾರಣದಿಂದ ಮಾಡಲ್ಪಡತಕ್ಕದ್ದು (“ಯಾಕೆ”); ಮತ್ತು ಸರಿಯಾದ ವ್ಯಕ್ತಿಗೆ ಮಾಡಲ್ಪಡತಕ್ಕದ್ದು (“ಯಾರು”). ಈ ಪ್ರತಿಯೊಂದು ಮೂಲ ವಿಷಯವು ಮೂರು ಕಾಲುಗಳ ಸ್ಟೂಲಿನ ಕಾಲಿಗೆ ಸಮನಾಗಿದೆ; ಪ್ರತಿಯೊಂದೂ ಅಗತ್ಯ. ಪ್ರತಿಯೊಂದು ಅತೀ ಅವಶ್ಯ.

ಹಿಂದಿನ ಪಾಠದಲ್ಲಿ ಬಾಪ್ತಿಸ್ಮ “ಯಾಕೆ?” ಎಂಬುದರ ಮೇಲೆ ನಮ್ಮ ಚರ್ಚೆ ಪ್ರಾರಂಭಿಸಿದೆವು. ಈ ಪಾಠದಲ್ಲಿ ಆ ಚರ್ಚೆಯನ್ನು ಪೂರ್ತಿ ಗೊಳಿಸುವೆವು ಮತ್ತು “ಹೇಗೆ?” ಹಾಗೂ “ಯಾರು?” ಎಂಬ ಪ್ರಶ್ನೆಗಳನ್ನು ಚರ್ಚಿಸುವೆವು.

## ಬಾಪ್ತಿಸ್ಮ: “ಯಾಕೆ?”

ಹಿಂದಿನ ಪಾಠವನ್ನು ಅಧ್ಯಯನ ಮಾಡಿ ಸಮಯ ದಾಟಿ ಹೋಗಿದ್ದರೆ, ಮಾರ್ಕ 16 ಮತ್ತು ಅಪೊಸ್ತಲರ ಕೃತ್ಯ 2 ಬಾಪ್ತಿಸ್ಮದ ಉದ್ದೇಶದ ಬಗ್ಗೆ ಹೇಳಿದ್ದನ್ನು ಪುನರಾವಲೋಕನ ಮಾಡಲು ಬಯಸಬಹುದು.

“ಯಾಕೆ ಬಾಪ್ತಿಸ್ಮ ಹೊಂದಬೇಕು?” ಎಂಬ ಪ್ರಶ್ನೆಗೆ ಇತರ ವಚನಗಳು ಉತ್ತರ ಕೊಡುವವು. ಕೆಲವನ್ನು ಇಲ್ಲಿ ಪಟ್ಟಿ ಮಾಡಿರುವೆನು. ಪ್ರತಿಯೊಂದರ ಹಿನ್ನೆಲೆಗೆ ಗಮನ ಕೊಡುತ್ತ ಇವುಗಳನ್ನು ನಿಮ್ಮ ಬೈಬಲಿನಲ್ಲಿ ಓದಿರಿ:

*ಅಪೊಸ್ತಲರ ಕೃತ್ಯ 22:16:* “ಈಗ ನೀನೇಕೆ ಸಾವಕಾಶ ಮಾಡುತ್ತೀ?ಎದ್ದು ಆತನ ಹೆಸರನ್ನು ಕರೆದು ಬಾಪ್ತಿಸ್ಮ ಹೊಂದಿ ನಿನ್ನ ಪಾಪಗಳನ್ನು ತೊಳೆದು ಕೋ” ಎಂದು ಪ್ರಸಂಗಿಯು ಸೌಲನಿಗೆ ಹೇಳಿದನು. ಪಾಪವನ್ನು ತೊಳೆಯುವಂಥದ್ದು ನೀರಲ್ಲ; ಬಾಪ್ತಿಸ್ಮದ ಸ್ಥಳದ ಹತ್ತಿರದ ನೀರಿಗೆ ಪವಿತ್ರತೆಯಾಗಲೀ, ಇಲ್ಲವೇ ಯಾವುದೇ ಮಾಂತ್ರಿಕತೆ ಯಾಗಲೀ ಇರುವದಿಲ್ಲ. ಯೇಸುವಿನ ರಕ್ತವು ನಮ್ಮ ಪಾಪಗಳನ್ನು ತೊಳೆ

ಯುವುದು (ಮತ್ತಾಯ 26:28; ಪ್ರಕಟನೆ 1:5). ಬಾಪ್ತಿಸ್ಮದಲ್ಲಿ ಯೇಸುವಿನ ರಕ್ತವು ಇದನ್ನು ಮಾಡುವುದೆಂದು ಅಪೊಸ್ತಲರ ಕೃತ್ಯ 22 ನಮಗೆ ಹೇಳುತ್ತದೆ.

*ಗಲಾತ್ಯ 3:26, 27:* "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ" (ವ. 26) ಎಂದು ಪೌಲನು ಗಲಾತ್ಯದವರಿಗೆ ಹೇಳಿದನು. "ನಂಬಿಕೆಯ ಮೂಲಕ ಅವರು ಯಾವಾಗ ದೇವರ ಪುತ್ರರಾದರು"? "ಕ್ರಿಸ್ತನಲ್ಲಿ[1] ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ" (ವ. 27) ಎಂದು ಪೌಲನು ಮುಂದುವರಿಸಿ ಹೇಳಿದನು. ನೀವು ದೇವರ ಪುತ್ರರಾಗಲು ಬಯಸಿದರೆ, ನೀವು ನಂಬುವ ಮತ್ತು ಬಾಪ್ತಿಸ್ಮ ಹೊಂದುವ ಅಗತ್ಯತೆಯಿರುವುದು. ನೀವು ಕ್ರಿಸ್ತನ ಭಾಗವಾಗಿರಲು ಬಯಸಿದರೆ, ನೀವು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವ ಅವಶ್ಯಕತೆಯಿರುವುದು. ನೀವು ನಿಮ್ಮನ್ನು ಕ್ರಿಸ್ತನಿಂದ ಧರಿಸಿ ಕೊಳ್ಳಲು ಬಯಸಿದರೆ, ನೀವು ಬಾಪ್ತಿಸ್ಮ ಹೊಂದಲು ಅವಶ್ಯಕತೆಯಿದೆ.

*1 ಪೇತ್ರ 3:21:* ನಾವೆಯಲ್ಲಿ ನೋಹ ಮತ್ತು ಇತರ ಏಳು ಜನರು ಹೇಗೆ ರಕ್ಷಿಸಲ್ಪಟ್ಟರು ಎಂದು ಪೇತ್ರನು ವಿವರಿಸಿದ ತರುವಾಯ, ಪೇತ್ರನು ಹೀಗೆ ಬರೆದನು: "ಆ ನೀರಿಗೆ ಅನುರೂಪವಾದ ಬಾಪ್ತಿಸ್ಮವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ. ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ. ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿ ಕೊಳ್ಳುವಂಥದ್ದೆ." ಬಾಪ್ತಿಸ್ಮದ ಉದ್ದೇಶವು ಸ್ನಾನಮಾಡುವದಲ್ಲ ಹಾಗೂ ದೇಹವನ್ನು ಸ್ವಚ್ಛಮಾಡುವಂಥದ್ದಲ್ಲ.[2] ಬಾಪ್ತಿಸ್ಮವು ದೇವರಿಗೆ ಹೃದಯದ ಪ್ರತ್ಯುತ್ತರವಾಗಿರುವುದು. "ಎದ್ದೇಳು, ಬಾಪ್ತಿಸ್ಮ ಹೊಂದು" ಎಂದು ದೇವರು ಹೇಳುತ್ತಾನೆ. "ಆಗಲಿ" ಎಂದು ನನ್ನ ಹೃದಯ ಹೇಳತ್ತದೆ. ಹಿಂದಿನ ಪಾಠದಲ್ಲಿ ಗಮನಿಸಿದಂತೆ, ಬಾಪ್ತಿಸ್ಮವು ಯೇಸುವಿನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನದಲ್ಲಿ ನಮ್ಮ ವಿಶ್ವಾಸವನ್ನು ಪ್ರಕಟಿಸುತ್ತದೆ.

"ಬಾಪ್ತಿಸ್ಮವು ಈಗ ನಿನ್ನನ್ನು ರಕ್ಷಿಸುವುದು" ಎಂಬ ಮಾತುಗಳು ಬಹಳ ಬಲವಾಗಿವೆ. ಈಗಾಗಲೇ, ನೀವು ಬಾಪ್ತಿಸ್ಮದ ಕಾರ್ಯದಲ್ಲಿ ಮಾತ್ರವೇ ಅರ್ಹತೆಯಿದೆ ಎಂಬುದು ಇದರ ಅರ್ಥವಲ್ಲ ಎಂಬುದನ್ನು ನೀವು ಅರ್ಥಮಾಡಿಕೊಳ್ಳತಕ್ಕದ್ದು. ನಮ್ಮನ್ನು ನಾವೇ ರಕ್ಷಿಸಿ ಕೊಳ್ಳಲಾರೆವು. ದೇವರ ಕೃಪೆಯಿಂದ ಮಾತ್ರವೇ ನಾವು ರಕ್ಷಿಸಲ್ಪಡಬಹುದು. ನಾವೆಯಲ್ಲಿದ್ದ ಜನರು ತಮಗೆ ದೇವರು ಹೇಳಿದ್ದನ್ನು ಮಾಡಿದಾಗ ಜನರು ರಕ್ಷಿಸಲ್ಪಟ್ಟಂತೆ ಇಂದು ಜನರು ದೇವರು ಆಜ್ಞಾಪಿಸುವದನ್ನು ಮಾಡುವಾಗ - ಅವರು ಬಾಪ್ತಿಸ್ಮ ಹೊಂದುವಾಗ ತಮ್ಮ ಪಾಪಗಳಿಂದ ರಕ್ಷಿಸಲ್ಪಡುವರು ಎಂದು ಈ ವಾಕ್ಯವು ಘೋಷಿಸುತ್ತದೆ. ದೇವರು ನಮ್ಮ ರಕ್ಷಣೆಗಾಗಿರುವ ತನ್ನ ಯೋಜನೆಯಲ್ಲಿ ಬಾಪ್ತಿಸ್ಮವನ್ನು ಕೂಡಿಸಿದ್ದಾನೆ ಎಂಬ ಅರ್ಥದಲ್ಲಿ "ಬಾಪ್ತಿಸ್ಮವು ರಕ್ಷಿಸುತ್ತದೆ."

ಬಾಪ್ತಿಸ್ಮ ಎಂಬ ಪದವನ್ನು ಉಪಯೋಗಿಸದೆ ಬಾಪ್ತಿಸ್ಮವನ್ನು ಸೂಚಿಸುವ ಕೆಲವು ಇತರ ವಚನಗಳನ್ನು ನೋಡಬಹುದು (ಉದಾಹರಣೆ: ಯೋಹಾನ 3:3, 5; ತೀತ 3:5). ನಿಮ್ಮ ಮನಸ್ಸಿನಲ್ಲಿ "ಯಾಕೆ" ಎಂಬ ಪ್ರಶ್ನೆಗೆ ಉತ್ತರ ಕೊಡಲು ನಾವು ಹೇಳಿದ ವಾಕ್ಯಗಳು ಸಾಕು ಎಂದು ನಾನು ನಿರೀಕ್ಷಿಸುತ್ತೇನೆ.

## ಬಾಪ್ತಿಸ್ಮ: "ಹೇಗೆ?"

"ಒಬ್ಬನು ಹೇಗ ಬಾಪ್ತಿಸ್ಮ ಹೊಂದಬೇಕು?" ಎಂಬ ಪ್ರಶ್ನೆಗೆ ಹೋಗೋಣ. ಹಿಂದಿನ ಪಾಠದಲ್ಲಿ "ಬಾಪ್ತಿಸ್ಮ"ವನ್ನು "ಮುಳುಗೇಳುಸುವಿಕೆ" ಎಂದು ಗ್ರೀಕ

ಪದ ವಿವರಿಸುತ್ತದೆಂದು ನೋಡಿದೆವು. ಹೀಗಿದ್ದರೂ ಬಾಪ್ತಿಸ್ಮದ ಕಾರ್ಯವನ್ನು ಅರ್ಥಮಾಡಿಕೊಳ್ಳಲಿಕ್ಕೆ ಗ್ರೀಕನ್ನು ಇಲ್ಲವೇ ಗ್ರೀಕ ಪದಕೋಶವುನ್ನು ತಿಳಿದುಕೊಳ್ಳುವ ಅವಶ್ಯಕತೆಯಿದೆ ಎಂಬ ಭಾವನೆಗಳನ್ನು ಕೊಡಲು ಬಯಸುವದಿಲ್ಲ. ಪರಿಶುದ್ಧ ಗ್ರಂಥದ ಲೇಖನಗಳಲ್ಲಿ ಬಾಪ್ತಿಸ್ಮದ ಕಾರ್ಯವು ಸ್ಪಷ್ಟವಾಗಿದೆ.

**ಯೋಹಾನನಿಂದ ಬಾಪ್ತಿಸ್ಮ (ಯೋಹಾನ 3; ಮತ್ತಾಯ 3)**

"ಯೋಹಾನನು ಸಲಿಮೂರಿನ ಹತ್ತಿರವಿರುವ ಐನೋನ ಎಂಬ ಸ್ಥಳದಲ್ಲಿ ಬಾಪ್ತಿಸ್ಮ ಮಾಡಿಸುತ್ತಿದ್ದನು, ಅಲ್ಲಿ ಬಹಳ ನೀರಿತ್ತು" ಎಂದು ಯೋಹಾನ 3:23 ಹೇಳುತ್ತದೆ. ತಲೆಯ ಮೇಲೆ ಚಿಮುಕಿಸುವ ಇಲ್ಲವೇ ಸುರಿಯುವ ಕಾರ್ಯಕ್ಕಾಗಿ ಸ್ವಲ್ಪ ನೀರು ಬೇಕಾಗುತ್ತದೆ. ಆದರೆ ಯೋಹಾನನ ಬಾಪ್ತಿಸ್ಮಕ್ಕೆ ಬಹಳ ನೀರು ಬೇಕಾಗಿತ್ತು.

ಯೋಹಾನನ ಬಾಪ್ತಿಸ್ಮವು "ಬಹಳ ನೀರನ್ನು" ತೆಗೆದು ಕೊಂಡಿತು. ಯಾಕಂದರೆ ಅದು ನೀರಿನಲ್ಲಿ ಮುಳುಗೇಳಿಸಿದ ಬಾಪ್ತಿಸ್ಮವಾಗಿತ್ತು. ಯೋಹಾನು ಯೇಸುವಿಗೆ ಬಾಪ್ತಿಸ್ಮ ಮಾಡಿಸಿದಾಗ ಕರ್ತನು "ಕೂಡಲೇ ನೀರಿನಿಂದ ಮೇಲಕ್ಕೆ ಬಂದನು" (ಮತ್ತಾಯ 3:16) ನೀರಿನೊಳಗೆ ಹೋದಾಗ (ಅನ್ವಯಿಸಿದ್ದು) ಮತ್ತು ನೀರಿನಿಂದ ಹೊರಗೆ ಬಂದದ್ದು (ಹೇಳಿದ್ದು) ಮುಳುಗೇಳಿಸುವದಕ್ಕೆ ಹೊಂದಾಣಿಕೆ ಯುಳ್ಳದ್ದಾಗಿದೆ. ಚಿಮುಕಿಸುವ ಇಲ್ಲವೇ ಸುರಿಯುವ ಕಾರ್ಯಕ್ಕೆ ಹೊಂದಿ ಕೊಂಡಿರುವದಿಲ್ಲ.

**ದೊಡ್ಡ ಅಧಿಕಾರಿಯ ಬಾಪ್ತಿಸ್ಮ (ಅಪೊಸ್ತಲರ ಕೃತ್ಯ 8)**

ಐಥಿಯೋಪ್ಯದ ಅಧಿಕಾರಿಯು ಮಾರ್ಪಾಟಾದದ್ದು ನಮ್ಮ ಮೂರನೆಯ ಪಾಠದಲ್ಲಿ ಪರಿಚಯಿಸಲ್ಪಟ್ಟಿದೆ. ಅಧಿಕಾರಿಯು ಯೇಸುವಿನಲ್ಲಿ ತನ್ನ ವಿಶ್ವಾಸವನ್ನು ಅರಿಕೆ ಮಾಡಿದನೆಂದು ನಾವು ನೋಡಿದ್ದೇವೆ. ಅನಂತರ, ನಾವು ಓದುತ್ತೇವೆ:

> ... ರಥವನ್ನು ನಿಲ್ಲಿಸು ಎಂದು ಅಪ್ಪಣೆ ಕೊಟ್ಟನು; ಫಿಲಿಪ್ಪನು ಕಂಚುಕಿಯು ಇಬ್ಬರೂ ನೀರಿನೊಳಗೆ ಇಳಿದರು. ಫಿಲಿಪ್ಪನು ಅವನಿಗೆ ಬಾಪ್ತಿಸ್ಮ ಮಾಡಿಸಿದನು. ಅವರು ನೀರನ್ನು ಬಿಟ್ಟು ಮೇಲಕ್ಕೆ ಬಂದಾಗ, ಕರ್ತನ ಆತ್ಮ ಫಿಲಿಪ್ಪನನ್ನು ಎತ್ತಿಕೊಂಡು ಹೋಗಲಾಗಿ ಕಂಚುಕಿಯು ಸಂತೋಷವುಳ್ಳವನಾಗಿ ತನ್ನ ದಾರಿಯನ್ನು ಹಿಡಿದು ಅವನನ್ನು ಕಾಣಲೇ ಇಲ್ಲ (ಅಪೊಸ್ತಲರ ಕೃತ್ಯ 8:38, 39).

ಫಿಲಿಪ್ಪನೂ ಐಥಿಯೋಪ್ಯದವನೂ "ನೀರಿನೊಳಗೆ ಇಳಿದರು" ಮತ್ತು "ನೀರನ್ನು ಬಿಟ್ಟು ಮೇಲಕ್ಕೆ ಬಂದರು" ಎಂಬುದನ್ನು ಗಮನಿಸಿರಿ. ಇದು ನೀರನ್ನು ಚಿಮುಕಿಸುವರನ್ನು ನೀರಿನ ಹೊರಗಿಡುವಂಥದ್ದು. ಫಿಲಿಪ್ಪನು ಅಧಿಕಾರಿಗೆ ನೀರನ್ನು ಚಿಮುಕಿಸಿದ್ದರೆ ಅವನು ನೀರಿನಿಂದ ಹೊರಗೆ ಇರುತ್ತಿದ್ದನು. ಹೀಗೆ ಕಾರ್ಯವು ಮುಳುಗೇಳಿಸುವದಕ್ಕೆ ಹೊಂದಾಣಿಕೆ ಯುಳ್ಳದ್ದಾಗಿತ್ತು ಮತ್ತು ಚಿಮುಕಿಸುವದಕ್ಕೆ, ಸುರಿಯುವದಕ್ಕೆ ಹೊಂದಾಣಿಕೆಯಿಲ್ಲದ್ದಾಗಿತ್ತು.

**ಬಾಪ್ತಿಸ್ಮವು ಹೂಣಿಡುವಿಕೆಯಂತದ್ದು (ರೋಮಾಪುರ 6; ಕೊಲಸ್ಸೆ 3)**

ಪೌಲನ ಬರಹಗಳಲ್ಲಿ, ಬಾಪ್ತಿಸ್ಮವು "ಹೊಣಿಡುವಿಕೆಯಂತೆ" ತೋರಿಸಲ್ಪಟ್ಟಿದೆ. ಅವರು ರೋಮ್‌ದಲ್ಲಿದ್ದ ಕ್ರೈಸ್ತರಿಗೆ ಬರೆದನು, "ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿ

ಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪ ಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪ ಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡೆದು ಕೊಳ್ಳಬೇಕು" (ರೋಮಾಪುರ 6:4) ಕೊಲೊಸ್ಸೆಯಲ್ಲಿಯ ಕ್ರೈಸ್ತರಿಗೆ ಹೀಗೆ ಬರೆದನು: "ನೀವು ಬಾಪ್ತಿಸ್ಮದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ. ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ" (ಕೊಲಸ್ಸೆ 2:12). ಶವಸಂಸ್ಕಾರದಲ್ಲಿ ಹೂಣಿಡುವಿಕೆಯನ್ನು ಬಹುಶಃ ನೀವು ನೋಡಿರಬಹುದು. ಹೂಣಿಡುವಿಕೆಯ ಭಾವವನ್ನು ಯಾವುದು ತೋರಿಸುತ್ತದೆ: ಚಿಮುಕಿಸುವುದೋ, ಸುರಿಯುವುದೋ ಇಲ್ಲವೇ ಮುಳುಗೇಳಿಸುವುದೋ? ಎಂಬುದನ್ನು ಪ್ರಶ್ನಿಸಿಕೊಳ್ಳಿರಿ.

ಹೊಸ ಒಡಂಬಡಿಕೆಯನ್ನು ಸಂಪೂರ್ಣವಾಗಿ ಹುಡುಕಿರಿ: ತಲೆಯ ಮೇಲೆ ನೀರನ್ನು ಚಿಮುಕಿಸಿ ಇಲ್ಲವೇ ಸುರಿದು ಬಾಪ್ತಿಸ್ಮ ಮಾಡಿಸಿದ ಯಾವುದೇ ಉದಾಹರಣೆಯನ್ನು ನೀವು ಕಂಡು ಕೊಳ್ಳುವದಿಲ್ಲ.

ಮೊದಲನೆಯ ಶತಮಾನದ ಸಭೆಯಲ್ಲಿ ಕೇವಲ ಮುಳುಗೇಳಿಸುವಿಕೆಯು ರೂಢಿ ಸಲ್ಪಟ್ಟಿತೆಂದು ಹೆಚ್ಚಾದ ಇತಿಹಾಸಕಾರರು ಒಪ್ಪಿಕೊಳ್ಳುತ್ತಾರೆ. (ಬಾಪ್ತಿಸ್ಮಕ್ಕಾಗಿ) ಚಿಮುಕಿ ಸುವುದು ಅನೇಕ ವರ್ಷಗಳವರೆಗೆ ಇರಲಿಲ್ಲ[3] ಸ್ನಾನಿಕನಾದ ಯೋಹಾನನ ಬಾಪ್ತಿಸ್ಮವು "ಪರಲೋಕದಿಂದ ಬಂದಿತೋ ಇಲ್ಲವೇ ಮನುಷ್ಯರಿಂದ ಬಂದಿತೋ?" ಎಂದು ಯೇಸು ಒಂದು ಸಲ ಪ್ರಶ್ನಿಸಿದನು (ಮಾರ್ಕ 11:30). ಯೋಹಾನನ ಬಾಪ್ತಿಸ್ಮವು ಪರಲೋಕ ದಿಂದ ಬಂದದ್ದು. ನಾನು ಅದೇ ಪ್ರಶ್ನೆಯನ್ನು ಚಿಮುಕಿಸುವ ಇಲ್ಲವೇ ಸುರಿಯುವ ಪದ್ಧತಿಯನ್ನು ಕುರಿತು ಕೇಳಿದರೆ, ಉತ್ತರವು "ಮನುಷ್ಯನಿಂದ" ಎಂದಿರುವುದು.

## ಬಾಪ್ತಿಸ್ಮ: "ಯಾರು?"

ಬಾಪ್ತಿಸ್ಮವನ್ನು ಕುರಿತು ಮೂರನೆಯ ಪ್ರಶ್ನೆಯು "ಯಾರು ಬಾಪ್ತಿಸ್ಮ ಹೊಂದ ಬೇಕು?" ಕೆಲವು ಧಾರ್ಮಿಕ ಗುಂಪುಗಳು ಶಿಶುಗಳಿಗೆ "ಬಾಪ್ತಿಸ್ಮ" ಮಾಡಿಸುವರು. ಆದರೆ ಮೊದಲಿನ ಪಾಠದಲ್ಲಿ ಶಿಶುಗಳಿಗೆ ಬಾಪ್ತಿಸ್ಮದ ಅವಶ್ಯಕತೆಯಿಲ್ಲ, ಯಾಕಂದರೆ ಅವು ಶುದ್ಧವಾಗಿಯೂ ಪವಿತ್ರವಾಗಿಯೂ ಜನಿಸಿವೆಯೆಂದು ನಾವು ನಿರ್ಧರಿಸಿದ್ದೇವೆ. ಹಾಗಾದರೆ ಯಾರು ಬಾಪ್ತಿಸ್ಮ ಹೊಂದಬೇಕು? "ಪ್ರತಿಯೊಬ್ಬ ಜವಾಬ್ದಾರಿಕೆಯುಳ್ಳ ವ್ಯಕ್ತಿ" ಎಂದು ನಾವು ಉತ್ತರಕೊಡಬಹುದು. ನಿಮ್ಮಲ್ಲಿ "*ಪ್ರತಿಯೊಬ್ಬರು* ಬಾಪ್ತಿಸ್ಮ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯ 2:38)[4] ಎಂದು ಪೇತ್ರನು ಆಜ್ಞಾಪಿಸಿದ್ದಾನೆ. ಆದರೆ ಕೆಲವೊಂದು ಅರ್ಹತೆಯ ಅಗತ್ಯತೆಯಿದೆ. ಬಾಪ್ತಿಸ್ಮವು ಕೇವಲ ಒಂದು ಆಚಾರವಾಗಲೀ, ಸಂಸ್ಕರವಾಗಲೀ ಆಗಿರುವದಿಲ್ಲ. ಅದು ತಮ್ಮ ಹೃದಯಗಳನ್ನೂ ಜೀವಿತಗಳನ್ನೂ ಸಿದ್ಧಪಡಿಸಿ ಕೊಂಡವರಿಗೆ ಇರುವುದು. ಹೀಗೆ ಪೇತ್ರನು ತನ್ನ ಕೇಳುಗರಿಗೆ ಅವರು ರಕ್ಷಣೆ ಹೊಂದುವ ಮೊದಲು ಮಾನಸಾಂತರ ಪಡಬೇಕೆಂದು ಹೇಳಿದನು (ಅಪೊಸ್ತಲರ ಕೃತ್ಯ 2:38).

ನಾವು ಈಗಾಗಲೇ ಅಧ್ಯಯನ ಮಾಡಿದ ವಚನಗಳು ಯಾರು ಬಾಪ್ತಿಸ್ಮ ಹೊಂದ ಬೇಕು ಎಂಬ ಪ್ರಶ್ನೆಯನ್ನು ಉತ್ತರಿಸಿವೆ. ಈ ವಾಕ್ಯವನ್ನು ನೀವು ಪುನಃ ಓದಲು ಬಯಸುವಿರಿ. ಯಾರು ಬಾಪ್ತಿಸ್ಮ ಹೊಂದಬೇಕು?

- ಬೋಧಿಸಲ್ಪಟ್ಟವನು (ಮತ್ತಾಯ 28:18, 19; ಮಾರ್ಕ 16:15, 16).
- ಯೇಸುವಿನಲ್ಲಿ ನಂಬಿಕೆಯಿಟ್ಟವನು (ಮಾರ್ಕ 16:15, 16).
- ತನ್ನ ಪಾಪಗಳಿಗಾಗಿ ಮಾಸಾಂತರ ಪಟ್ಟವನು (ಅಪೊಸ್ತಲರ ಕೃತ್ಯ 2:36-38).
- ಯೇಸುವಿನಲ್ಲಿ ತನ್ನ ನಂಬಿಕೆಯನ್ನು ಅರಿಕೆ ಮಾಡಿದವನು (ಅಪೊಸ್ತಲರ ಕೃತ್ಯ 8:36-39; ರೋಮಾಪುರ 10:9, 10).

ಈ ವಿವರಣೆಯಲ್ಲಿ ಶಿಶುಗಳು ಹೊಂದಿ ಕೊಳ್ಳುವದಿಲ್ಲ.

ಬಾಪ್ತಿಸ್ಮ ಹೊಂದಲು ಒಬ್ಬ ವ್ಯಕ್ತಿಯು ಯಾವಾಗ ಸಾಕಷ್ಟು ದೊಡ್ಡವನಾಗುತ್ತಾನೆ? ಯಾವಾಗಾ ಒಬ್ಬ ವ್ಯಕ್ತಿಯು ಬಾಪ್ತಿಸ್ಮ ಹೊಂದುವ ಅಗತ್ಯತೆಯಿದೆ? ನಿರ್ಧಿಷ್ಟವಾದ ವಯಸ್ಸನ್ನು ಬೈಬಲು ಕೊಡುವದಿಲ್ಲ. ಆದರೆ ಬಾಪ್ತಿಸ್ಮ ಹೊಂದುವ ವ್ಯಕ್ತಿಯು ತಿಳಿದು ಕೊಳ್ಳಲು ಸಾಕಷ್ಟು ದೊಡ್ಡವನಾಗಿರುವ ಅಗತ್ಯತೆಯಿದೆ.


- ಅವನು ರಕ್ಷಣೆಯ ಅಗತ್ಯತೆಯಲ್ಲಿದ್ದ ಪಾಪಿಯಗಿದ್ದಾನೆ.[5]
- ಅವನನ್ನು ರಕ್ಷಿಸಲು ಯೇಸುವು ಮರಣ ಹೊಂದಿದನು.
- ಬಾಪ್ತಿಸ್ಮ ಹೊಂದುವುದು ಅವನ ರಕ್ಷಣೆಗಾಗಿ ಇರುವ ದೇವರ ಯೋಜನೆಯ ಭಾಗವಾಗಿದೆ.
- ಅವನು ಕರ್ತನಿಗೆ ತನ್ನ ಜೀವಿತವನ್ನು ವೈಯಕ್ತಿಕವಾಗಿ ಸರ್ಮಪಣೆ ಮಾಡುತ್ತಿರುವನು.

## ಬಾಪ್ತಿಸ್ಮ:
## "ಯಾರು?"; "ಹೇಗೆ?"; ಮತ್ತು "ಯಾಕೆ?"

ಬಾಪ್ತಿಸ್ಮ "ಯಾರು?" ಮತ್ತು "ಹೇಗೆ?" ಹಾಗೂ "ಯಾಕೆ?" ಎಂಬುದನ್ನು ಉದಾಹರಿಸುವ ವಾಕ್ಯ ರೋಮಾಪುರ 6:3-6:

> ... ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿ ಕೊಂಡವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ಬಾಪ್ತಿಸ್ಮ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಕ್ರಿಸ್ತನು ತಂದೆಯ ಮಹಿಮೆಯಿಂದ ಹೇಗೆ ಸತ್ತವರೊಳ ಗಿಂದ ಎಬ್ಬಿಸಲ್ಪಟ್ಟನೋ ಹಾಗೆಯೇ ನಾವುಕೂಡ ಜೀವದಿಂದೆದ್ದು ನೂತನ ಜೀವನದಲ್ಲಿ ನಡೆದು ಕೊಳ್ಳಬೇಕು. ಹೇಗಂದರೆ ನಾವು ಆತನ ಮರಣಕ್ಕೆ ಸಾದೃಶ್ಯವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸಾದೃಶ್ಯವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾದೆವು. ಪಾಪಾಧೀನ ಶರೀರ ಸ್ವಭಾವವು ನಾಶವಾಗಿ (ಪಾಪದ ಶರೀರವು) ನಾವು ಇನ್ನೂ ಪಾಪಕ್ಕೆ ದಾಸರಾಗಿರದಂತೆ ನಮ್ಮ ಪೂರ್ವ ಸ್ವಭಾವವು (ಪುರುಷನು) ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟನೆಂದು ತಿಳಿದಿದ್ದೇವೆ.

ಬಾಪ್ತಿಸ್ಮದ ಮೇಲಿನ ಈ ವಚನಗಳ ಬೋಧನೆಯನ್ನು ಈ ರೀತಿಯಲ್ಲಿ ಚಿತ್ರೀಕರಿಸಬಹುದು:




"ಜೀವನದ ನೂತನತೆ"

D = ಮರಣ
B = ಬಾಪ್ತಿಸ್ಮ
R = ಪುನರುತ್ಥಾನ

ಯೇಸುವಿನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನಕ್ಕೆ ಬಾಪ್ತಿಸ್ಮದ ಸಂಬಂಧವನ್ನು ಗಮನಿಸಿರಿ.[6]

ಯೇಸುವು ಶಿಲುಬೆಯ ಮೇಲೆ ಮರಣ ಹೊಂದಿದನು (ಲೂಕ 23:33-46; ಫಿಲಿಪ್ಪಿ 2:8). ಪಾಪದಲ್ಲಿ ಆತ್ಮಿಕವಾಗಿ ಸತ್ತು ಹೋದವನು (ಎಫೆಸ 2:1, 5) ವಿಶ್ವಾಸ, ಮಾನಸಾಂತರ ಹಾಗೂ ಅರಿಕೆಯ ಮುಖಾಂತರ ಪಾಪಕ್ಕೆ ಸಾಯಬಹುದು (ರೋಮಾಪುರ 6:11).

ಯೇಸು ಸಮಾಧಿಯಲ್ಲಿ ಹೂಣಲ್ಪಟ್ಟನು (ಯೋಹಾನ 19:40-42; 1 ಕೊರಿಂಥ 15:4) ಹಾಗೆಯೇ, ವಿಧೇಯ ವಿಶ್ವಾಸಿಯು ಬಾಪ್ತಿಸ್ಮದ ನೀರಿನ ಸಮಾಧಿಯಲ್ಲಿ ಹೂಣಲ್ಪಡುತ್ತಾನೆ.

ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು (ಮತ್ತಾಯ 28:1-8; ರೋಮಾಪುರ 1:4) ಅದೇ ರೀತಿಯಲ್ಲಿ ಕ್ರೈಸ್ತನು "ನೂತನ ಜೀವಕ್ಕೆ" ನೀರಿನಿಂದ ಎಬ್ಬಿಸಲ್ಪಟ್ಟಿದ್ದಾನೆ.

ಒಂದು ಸಭಾಪಂಗಡದ ಬಾಪ್ತಿಸ್ಮದೊಂದಿಗೆ ಇಲ್ಲವೇ ಇನ್ನೊಂದರಿಂದ ಯಾವುದು ತಪ್ಪಾಗಿರುವುದು ಎಂದು ಜನರು ನನ್ನನ್ನು ಪ್ರಶ್ನಿಸುತ್ತಾರೆ. ನಿಯಮವಾಗಿ, "ಬಾಪ್ತಿಸ್ಮ" ಎಂದು ಕರೆಯಲ್ಪಡುವ ಸಭಾಪಂಗಡಗಳು ನಾವು ಅಧ್ಯಯನ ಮಾಡಿದ ಮೂರು ಲಕ್ಷಣಗಳಲ್ಲಿ ಒಂದು ಇಲ್ಲವೇ ಹೆಚ್ಚು ಲಕ್ಷಣಗಳ ಕೊರತೆಯುಳ್ಳವುಗಳಾಗಿರುವವು. ಹೆಚ್ಚಾದ ಸಂದರ್ಭಗಳಲ್ಲಿ ಈ "ಬಾಪ್ತಿಸ್ಮಗಳು" ಕ್ರಿಸ್ತನ ಮರಣ, ಹೂಣಿಡುವಿಕೆ ಮತ್ತು ಪುನರುತ್ಥಾನವನ್ನು, ಬಾಪ್ತಿಸ್ಮದ ಸಂಬಂಧವನ್ನು ಹಾಳು ಮಾಡುವುದು ದುಃಖಕರವಾದ ಸಂಗತಿಯಾಗಿದೆ.

- ಕೆಲವರು ಶಿಶುಗಳಿಗೆ "ಬಾಪ್ತಿಸ್ಮ ಕೊಡುತ್ತಾರೆ" ಆದರೆ ಶಿಶುವು ಪಾಪದಲ್ಲಿ ಸತ್ತು ಹೋಗಿರುವದಿಲ್ಲ.
- ಕೆಲವರು ನೀರನ್ನು ಚಿಮುಕಿಸಿ ಅದನ್ನು ಬಾಪ್ತಿಸ್ಮ ಎಂದು ಕರೆಯುತ್ತಾರೆ. ಆದರೆ ಚಿಮುಕಿಸುವುದು ಹೂಣಿಡುವುಕೆ ಯಾಗಿರುವದಿಲ್ಲ.
- ಕೆಲವರು ಮುಳುಗೇಳುತ್ತಾರೆ. ಆದರೆ ಮಳುಗೇಳಿಸಲ್ಪಡುವವರಿಗೆ ಅವನು ಬಾಪ್ತಿಸ್ಮ ಹೊಂದವ ಮೊದಲು ನೂತನ ಜೀವನವನ್ನು ಹೊಂದಿರುತ್ತಾನೆ, ಆದರೆ ಅನಂತರ ಅಲ್ಲ, ಯೇಸುವಿನಲ್ಲಿ ನೂತನ

ಜೀವನ ಇರಬೇಕೆಂದು ಒತ್ತಿ ಹೇಳುತ್ತಾರೆ. ಹೀಗೆ ನೂತನ ಜೀವಕ್ಕೆ ಎಬ್ಬಿಸಲ್ಪಡುವ ರೂಪಕವು ನಾಶಪಡಿಸಲ್ಪಡುತ್ತದೆ (ಅವರ ತತ್ವದ ಪ್ರಕಾರ "ಸಜೀವ" ಜನರನ್ನು ಹೂಣಿಡುತ್ತಾರೆ, ಆದರೆ ಸತ್ತವರನ್ನಲ್ಲ).

ಒಬ್ಬ ವ್ಯಕ್ತಿಯು ತನ್ನ ಬಾಪ್ತಿಸ್ಮವು ಹೊಸ ಒಡಂಬಡಿಕೆಯ ಸಮಯಗಳಲ್ಲಿ ರೂಢಿಸಲ್ಪಟ್ಟಿದ್ದಕ್ಕಿಂದ ಭಿನ್ನವಾಗಿತ್ತೆಂದು ಕಂಡು ಕೊಂಡರೆ ಅವನು ಏನು ಮಾಡಬೇಕು? ಆ ಪ್ರಶ್ನೆಗೆ ಅಪೊಸ್ತಲರ ಕೃತ್ಯ 19 ಉತ್ತರವನ್ನು ಒದಗಿಸುತ್ತದೆ. ಪೌಲನು ಎಫೆಸಕ್ಕೆ ಬಂದಾಗ, ಅವನು ಕ್ರೈಸ್ತರೆಂದು ಯೋಚಿಸಿದ ಹನ್ನೆರಡು ಜನ ಪುರುಷರನ್ನು ಕಂಡು ಕೊಂಡನು. ಅವನು ಸ್ನಾನಿಕನಾದ ಯೋಹಾನನ ಬಾಪ್ತಿಸ್ಮವು ಸಿದ್ಧತೆಯ ಬಾಪ್ತಿಸ್ಮವಾಗಿತ್ತು. ಅದರ ದಿನಕ್ಕೆ ಯೋಗ್ಯವಾಗಿತ್ತು, ಆದರೇ ಅದರ ಬದಲಾಗಿ ಯೇಸುವಿನ ಬಾಪ್ತಿಸ್ಮವು[7] ಕೊಡಲ್ಪಟ್ಟಿತ್ತು. ಯೋಹಾನನ ಬಾಪ್ತಿಸ್ಮವು ಪ್ರಸ್ತುತವಾಗದೇ ಇದ್ದಾಗ ಹನ್ನೆರಡು ಜನರು ಯೋಹಾನನ ಬಾಪ್ತಿಸ್ಮವನ್ನು ಹೊಂದಿದ್ದರು.[8] ಆದರೆ ಬಾಪ್ತಿಸ್ಮದ "ಹೇಗೆ?" ಮತ್ತು "ಯಾರು?" ಎಂಬುದು ಸರಿಯಾಗಿತ್ತು, ಆದರೆ "ಯಾಕೆ?" ಎಂಬುದು ತಪ್ಪಾಗಿತ್ತು.[9] ಮುಂದೆ ಪೌಲನು ಅವರಿಗೆ ಬೋಧಿಸಿದನಂತರ "ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡರು" (ಅಪೊಸ್ತಲರ ಕೃತ್ಯ 19:5).

## ಮುಕ್ತಾಯ

ಈ ಹಂತದಲ್ಲಿ ನಿಮ್ಮ ಸ್ವಂತ ಬಾಪ್ತಿಸ್ಮವನ್ನು ಹೊಸ ಒಡಂಬಡಿಕೆಯ ಬಾಪ್ತಿಸ್ಮದೊಂದಿಗೆ ಹೋಲಿಸ ಬಯಸಬಹುದು. ಈ ಅಧ್ಯಯನದ ಪ್ರಾರಂಭದಲ್ಲಿ ನೀವು ತುಂಬಿದ ಪ್ರಶ್ನಾವಳಿಯನ್ನು ಜ್ಞಾಪಿಸಿಕೊಳ್ಳಿರಿ. ನಿಮ್ಮ ಉತ್ತರಗಳ ಕಡೆಗೆ ನೋಡಿರಿ. ಸ್ವಲ್ಪ ನೀರು ನಿಮ್ಮ ಮೇಲೆ ಚಿಮುಕಿಸಲ್ಪಟ್ಟಿದೆಯೋ ಇಲ್ಲವೇ ನೀವು ಮುಳುಗೇಳಿಸಲ್ಪಟ್ಟಿರುವಿರೋ? ಯಾರಾದರೂ ನಮಗೆ "ಬಾಪ್ತಿಸ್ಮ" ಕೊಟ್ಟಾಗ (ಇಲ್ಲವೇ "ನಾಮಕರಣ" ವಾದಾಗ) ನೀವು ಕೇವಲ ಶಿಶುವಾಗಿದ್ದಿರೋ? ನೀವೇನು ಮಾಡುತ್ತಿದ್ದಿರಿ ಎಂಬುದನ್ನು ನೀವು ಅರ್ಥ ಮಾಡಿಕೊಳ್ಳದಷ್ಟು ನೀವು ಚಿಕ್ಕವರಾಗಿರುವ ಸಾಧ್ಯತೆಯಿದೆಯೇ? ನೀವು ವೈಯಕ್ತಿಕವಾಗಿ ಒಪ್ಪಿಸಿ ಕೊಡುವಷ್ಟು ದೊಡ್ಡವರಾಗಿದ್ದರೆ ಹಾಗೂ ಮುಳುಗೇಳಿಸಲ್ಪಟ್ಟಿದ್ದರೆ, ಬಾಪ್ತಿಸ್ಮವು ಅತ್ಯಗತ್ಯವಲ್ಲದ ಆಚರಣೆಯಾಗಿರುವುದು ನಿಮಗೆ ಬೋಧಿಸಲ್ಪಟ್ಟಿರುವುದೋ? ಉದಾಹರಣಾರ್ಥವಾಗಿ, ನೀವು ಬಾಪ್ತಿಸ್ಮ ಹೊಂದುವದಕ್ಕಿಂತ ಮೊದಲು ನೀವು ರಕ್ಷಿಸಲ್ಪಟ್ಟಿರುವಿರೆಂದು ನೀವು ಬೋಧಿಸಲ್ಪಟ್ಟಿರುವಿರೋ?

ನಿಮ್ಮನ್ನು ಬೇಸರಗೊಳಿಸಲು ಇಲ್ಲವೇ, ಕೆಟ್ಟಭಾವನೆ ಹೊಂದಿ ಕೊಳ್ಳುವಂತೆ ನಾನು ಈ ಪ್ರಶ್ನೆಯನ್ನು ಕೇಳುವದಿಲ್ಲ. ನಿತ್ಯವಾಗಿ ರಕ್ಷಿಸಲ್ಪಡುವದಕ್ಕಿಂತ ಹೆಚ್ಚು ಮುಖ್ಯವಾದದ್ದು ಬೇರೆ ಯಾವುದೂ ಇಲ್ಲದ್ದರಿಂದ ನಾವು ಅವುಗಳನ್ನು ಕೇಳುತ್ತಿದ್ದೇನೆ. ತನ್ನ ಪ್ರಾಣದ ರಕ್ಷಣೆಯ ಬಗ್ಗೆ ಯಾರೂ ಆಟವಾಡ ಬಯಸುವದಿಲ್ಲ.

ಹೊಸ ಒಡಂಬಡಿಕೆಯ ಪ್ರಕಾರವಾಗಿ ನೀವು ಬಾಪ್ತಿಸ್ಮ ಹೊಂದಿರುವದಿಲ್ಲ ಎಂಬುದನ್ನು ನೀವು ಕಂಡುಕೊಂಡರೆ, ಅಪೊಸ್ತಲರ ಕೃತ್ಯ 19ರಲ್ಲಿಯ ಪ್ರಾಮಾಣಿಕ ಶಿಷ್ಯರಂತೆ ಆಗಿರಿ: ಈ ಸಲ ಬೈಬಲು ಬೋಧಿಸಿದ್ದಕ್ಕೆ ಸರಿಯಾಗಿ ಬಾಪ್ತಿಸ್ಮ (ಇಲ್ಲವೇ ಪುನಃ ಬಾಪ್ತಿಸ್ಮ) ಹೊಂದಿರಿ.

ಟಿಪ್ಪಣಿಗಳು

[1]ಎಲ್ಲಾ ಆತ್ಮಿಕ ಆಶೀರ್ವಾದಳು "ಕ್ರಿಸ್ತನಲ್ಲಿ" ಇರುವವು (ಎಫೆಸ 1:3). ಆ ಆಶೀರ್ವಾದಗಳು ದೊರೆಯುವ "ಕ್ರಿಸ್ತನಲ್ಲಿ" ಹೇಗೆ ಪಡೆಯ ಬೇಕೆಂಬುದನ್ನು ನಮಗೆ ಎರಡು ವಚನಗಳು ಹೇಳುತ್ತವೆ: ಗಲಾತ್ಯ 3:27, ಮತ್ತು ರೋಮಾಪುರ 6:3, ಒಬ್ಬನು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದನು ಎಂದು ನಮಗೆ ಹೇಳುತ್ತದೆ. [2]ಇದಕ್ಕೆ ವಿರುದ್ಧವಾಗಿ, ಆಗಾಗ ಕೊಳೆಯಾದ ಕೊಳದಲ್ಲಿ ಜನರಿಗೆ ನಾನು ಬಾಪ್ತಿಸ್ಮ ಮಾಡಿಸ ಬೇಕಾಗಿತ್ತು. ಯಾಕಂದರೆ ಮುಳುಗೇಳಿಸಲು ಅದು ಮಾತ್ರವೇ ಲಭ್ಯಸ್ಥಳವಾಗಿತ್ತು. [3]1600ವರೆಗೆ ಮುಳುಗೇಳಿಸುವದಕ್ಕೆ ಬದಲಾಗಿ ಚಿಮುಕಿಸುವುದು ಬದಲಿಯಾಗಿ ಅಧಿಕೃತವಾಗಿ ಸ್ವೀಕರಿಸಲ್ಪಟ್ಟಿರಲಿಲ್ಲ. ಚಿಮುಕಿಸುವದಕ್ಕೆ ಅಧಿಕೃತವಾಗಿರುವುದು ಕಥೋಲಿಕ ಸಭೆ. [4]ಸ್ಪಷ್ಟನೆ ನನ್ನದು. [5]"ಒಬ್ಬಾತನು ನಿನ್ನನ್ನು ಪ್ರೀತಿಸುತ್ತಾನೆ" ಎಂಬ ಪಾಠದಲ್ಲಿ ಕಂಡುಬರುವ "ಜವಾಬ್ದಾರರಾಗುವ ವಯಸ್ಸು" ಎಂಬುದರ ಮೇಲಿನ ಟಿಪ್ಪಣಿಗಳನ್ನು ನೋಡಿರಿ. [6]ಸುವಾರ್ತೆಯ ಹೃದಯವು ಯೇಸುವಿನ ಮರಣ, ಹೂಣಿಡುವಿಕೆ, ಮತ್ತು ಪುನರುತ್ಥಾನ (1 ಕೊರಿಂಥ 15:1-4). [7]"ಯೇಸುವಿನ ಬಾಪ್ತಿಸ್ಮ"ದಿಂದ ಯೇಸು ತನ್ನ ಮಹಾ ಆಜ್ಞೆಯಲ್ಲಿ ಆಜ್ಞಾಪಿಸಿದ ಬಾಪ್ತಿಸ್ಮ ಎಂಬುದು ನನ್ನ ಅರ್ಥ (ಮತ್ತಾಯ 28:18-20; ಮಾರ್ಕ 16:15, 16). [8]ಬಹುಶಃ ಅವರು ಅಪೊಲ್ಲೋಸನಿಂದ ಬೋಧಿಸಲ್ಪಟ್ಟಿದ್ದರು ಮತ್ತು ಬಾಪ್ತಿಸ್ಮ ಹೊಂದಿದ್ದರು. ಅವನು ಅಕ್ವಿಲ ಮತ್ತು ಪ್ರಿಸ್ಕಿಲಳಿಂದ "ದೇವರ ಮಾರ್ಗವು ಅವನಿಗೆ ಸೂಕ್ಷ್ಮವಾಗಿ ವಿವರಿಸಲ್ಪಡುವವರೆಗೆ" (ಅಪೊಸ್ತಲರ ಕೃತ್ಯ 18:26) "ಯೋಹಾನನು ಮಾಡಿಸಿದ ಬಾಪ್ತಿಸ್ಮವನ್ನು ಮಾತ್ರ ಬಲ್ಲವನಾಗಿದ್ದನು" (ಅಪೊಸ್ತಲರ ಕೃತ್ಯ 18:25). [9]ಅವರ ಬಾಪ್ತಿಸ್ಮದ ಉದ್ದೇಶದೊಂದಿಗೆ ಒಂದು ಸಂಗತಿ ತಪ್ಪಾಗಿದ್ದದ್ದು ಯೋಹಾನನ ಬಾಪ್ತಿಸ್ಮವು ಯೇಸುವಿನ ಬಾಪ್ತಿಸ್ಮಕ್ಕೆ ಇದ್ದಂತೆ ಪರಿಶುದ್ಧಾತ್ಮನ ವರದ ವಾಗ್ದಾನವು ಒಳಗೊಂಡಿರಲಿಲ್ಲ.

© 2009 Truth for Today